ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 23-03-2017

## ಪತ್ರಿಕಾ ಆಮಂತ್ರಣ

1. ವಿಶ್ವ ಕ್ಷಯರೋಗ ದಿನಾಚರಣೆಯ ರಾಜ್ಯಮಟ್ಟದ ಸಮಾರಂಭ:
"ಎಲ್ಲರೂ ಒಗ್ಗೂಡಿ ಕ್ಷಯರೋಗವನ್ನು ನಿರ್ಮೂಲನಗೊಳಿಸೋಣ'

ಉಪಸ್ಥಿತರಿರುವರು:
ಕೆ.ಆರ್. ರಮೇಶ್‌ಕುಮಾರ್,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು,

ರಾಮಲಿಂಗಾರೆಡ್ಡಿ,
ಸಾರಿಗೆ ಸಚಿವರು

ಡಾ. ಶರಣ ಪ್ರಕಾಶ್ ಪಾಟೀಲ್,
ವೈದ್ಯಕೀಯ ಶಿಕ್ಷಣ ಸಚಿವರು.

ದಿನಾಂಕ: 24–3–2017 ರಂದು ಬೆಳಿಗ್ಗೆ 9.30 ಗಂಟೆಗೆ

ಸ್ಥಳ : ಶಾಂತಾಬಾಯಿ ದೇವರಾಮ್ ಶಿವರಾಮ್ ಕ್ಷಯರೋಗ
ಸಂಶೋಧನಾ ಕೇಂದ್ರ ಮತ್ತು ರಾಜೀವ್ ಗಾಂಧೀ ಎದೆರೋಗಗಳ ಆಸ್ಪತ್ರೆ,
ಸೋಮೇಶ್ವರನಗರ, ಬೆಂಗಳೂರು.

2. <u>ರಾಷ್ಟ್ರೀಯ ಕಲಾ ಪ್ರದರ್ಶನ</u> :

<u>ಉದ್ಘಾಟನೆ:</u>

ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

<u>ಮುಖ್ಯ ಅತಿಥಿಗಳು:</u>

ಡಾ. ಅಜಯ್ ಕುಮಾರ್ ಸಿಂಗ್,
ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು,

ದಿನಾಂಕ: 24–3–2017 ಶುಕ್ರವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ : ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಂಗಳೂರು.

3. <u>ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು ಹಾಗೂ ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಇವರ ಸಹಯೋಗದೊಂದಿಗೆ</u>

**ರೀಜಿನಲ್ ಮೋಡರ್ನಿಟಿ ದಿ ಮದ್ರಾಸ್ ಆರ್ಟ್ ಮೂವ್‌ಮೆಂಟ್ 1960–1980**
**ಪೈಂಟಿಂಗ್ ಆಂಡ್ ಸ್ಕಲ್ಪ್ಚರ್**

**ಉದ್ಘಾಟನೆ:**

**ಸುಭಾಶ್ ಚಂದ್ರ ಕುಂಟಿಯಾ,**
**ಮುಖ್ಯ ಕಾರ್ಯದರ್ಶಿಗಳು,**
**ಕರ್ನಾಟಕ ಸರ್ಕಾರ**

**ಪ್ರಕಟಣೆ ಲೋಕಾರ್ಪಣೆ:**

**ಅದ್ವೈತ ಗಡನಾಯಕ್, ಮಹಾ ನಿರ್ದೇಶಕರು, ರಾ.ಆ.ಕ.ಸಂ.**

**ದಿನಾಂಕ: 24–3–2017 ರಂದು ಸಂಜೆ 6.00 ಗಂಟೆಗೆ**

**ಸ್ಥಳ : ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ನಂ 49, ಮಾಣಿಕ್ಯವೇಲು ಮ್ಯಾನ್‌ಷನ್, ಅರಮನೆ ರಸ್ತೆ, ಬೆಂಗಳೂರು – 560 052**

**ವಿಧಾನಸಭೆಯಲ್ಲಿ ಇಂದು:**

## ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ತಿದ್ದುಪಡಿ ವಿಧೇಯಕ ಅಂಗೀಕಾರ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ 2017ನ್ನು ಇಂದು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು. ಈ ಅಧಿನಿಯಮದಲ್ಲಿ ರಾಜ್ಯ ಸರ್ಕಾರವು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವುದು, ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯು ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಂದರ್ಭದಲ್ಲಿ ಅಂಥ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ ಅಭ್ಯರ್ಥಿಗಳ ರ್‍ಯಾಂಕಿಂಗ್ ಅನ್ನು ಪಡೆಯುವುದು, ಡೀಮ್ಡ್ ವಿಶ್ವವಿದ್ಯಾಲಯಗಳಲ್ಲೂ ಸಹ ಸಾಮಾನ್ಯ ಪ್ರವೇಶ ಪರೀಕ್ಷೆ ಅಥವಾ ಭಾರತ ಸರ್ಕಾರ ಅಥವಾ ಅದರ ಏಜೆನ್ಸಿಯ ಮೂಲಕ ಸೀಟುಗಳನ್ನು ತುಂಬುವುದು, ಖಾಸಗಿ ಶೈಕ್ಷಣಿಕ ಸಂಸ್ಥೆಗಳು ಸರ್ಕಾರದೊಂದಿಗೆ ಪರಸ್ಪರ ಒಪ್ಪಂದಕ್ಕೆ ಒಪ್ಪಿದಲ್ಲಿ ಆಗ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಅಂಥ ಒಪ್ಪಂದಕ್ಕೆ ಅನುಸಾರವಾಗಿ ನಡೆಸುವುದು, ರಾಜ್ಯ ಸರ್ಕಾರವು ತಾನು ಅಥವಾ ತನ್ನ ಏಜೆನ್ಸಿಯ ಮೂಲಕ ನಡೆಸುವ ಕೇಂದ್ರೀಕೃತ ಕೌನ್ಸಿಲಿಂಗ್‌ಗಾಗಿ ನಿಯಮಗಳನ್ನು ನಿಯಮಿಸಬಹುದಾದ ಅಂಥ ರೀತಿಯಲ್ಲಿ ರಚಿಸುವುದು, ವೃತ್ತಿ ಶಿಕ್ಷಣ ಸಂಸ್ಥೆ ಎಂಬ ಪರಿಭಾಷೆಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಸೇರಿಸುವುದು ಹಾಗೂ ಇತರ ಪ್ರಾಸಂಗಿಕ ತಿದ್ದುಪಡಿಗಳನ್ನು ಮಾಡಲು ಈ ವಿಧೇಯಕವನ್ನು ಮಂಡಿಸಲಾಗಿತ್ತು.

## <u>36,589 ಆಶಾ ಕಾರ್ಯಕರ್ತೆಯರು</u>

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ನಮ್ಮ ರಾಜ್ಯದಲ್ಲಿ 36589 ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ತಾಯಿ ಮತ್ತು ಮಕ್ಕಳಾರೋಗ್ಯ ಸುಧಾರಣೆ, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು ಮತ್ತು ಸಮುದಾಯ ಜಾಗೃತಿ ಚಟುವಟಿಕೆಗಳ 33 ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್ ಕುಮಾರ್ ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ಮಹಾಲಕ್ಷ್ಮೀ ಲೇಔಟ್‌ನ ಶಾಸಕ ಗೋಪಾಲಯ್ಯ ಕೆ ಅವರ ಪ್ರಶ್ನೆಗೆ ಉತ್ತರಿಸುತ್ತಾ ಆಶಾ ಕಾರ್ಯಕರ್ತೆಯರ ಆರೋಗ್ಯ ರಕ್ಷಣೆಯ ಉದ್ದೇಶದಿಂದ ಆಶಾ ಕಾರ್ಯಕರ್ತೆಯು ಸೇರಿದಂವಿ ಇವರ ಕುಟುಂಬದ ಇತರೆ ಸದಸ್ಯರಿಗೂ ಸೇರಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಆರೋಗ್ಯ ವಿಮಾ ಯೋಜನೆಗೆ ಒಳಪಡಿಸಲಾಗಿದೆ. ಬಿಪಿಎಲ್ ಆಶಾ ಕಾರ್ಯಕರ್ತೆಯರಿಗೆ ವಾಜಪೇಯಿ ಆರೋಗ್ಯಶ್ರೀ, ಎಪಿಎಲ್ ಆಶಾ ಕಾರ್ಯಕರ್ತೆಯರಿಗೆ ರಾಜೀವ್ ಆರೋಗ್ಯ ಶ್ರೀ ಯೋಜನೆಯಡಿ ಉಚಿತವಾಗಿ ಆರೋಗ್ಯ ರಕ್ಷಣಾ ಸೇವೆಗಳನ್ನು ನೀಡಲಾಗುವುದು.

2017–18 ನೇ ಸಾಲಿನ ರಾಜ್ಯ ಆಯವ್ಯಯದಲ್ಲಿ 1000 ರೂಪಾಯಿಗಳ ಕನಿಷ್ಠ ಮಾಸಿಕ ಗೌರವಧನವನ್ನು ಘೋಷಿಸಲಾಗಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

# ರಾಜ್ಯದಲ್ಲಿ 457 ಮಾಹಿತಿ ತಂತ್ರಜ್ಞಾನ ಹಾಗೂ 47 ಜೈವಿಕ ತಂತ್ರಜ್ಞಾನ ಕಂಪನಿ ನೋಂದಣಿ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದಲ್ಲಿ ಇಲ್ಲಿಯವರಿಗೆ 457 ಮಾಹಿತಿ ತಂತ್ರಜ್ಞಾನ ಹಾಗೂ 47 ಜೈವಿಕ ತಂತ್ರಜ್ಞಾನ ಕಂಪನಿಗಳು ನೋಂದಣಿ ಹೊಂದಿರುತ್ತದೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು

ಇಂದು ವಿಧಾನಸಭೆಯ ಕಲಾಪ ಸಂದರ್ಭದಲ್ಲಿ ಶೃಂಗೇರಿ ಶಾಸಕ ಜೀವರಾಜ್ ಡಿ.ಎನ್. ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ಬೆಂಗಳೂರು – 429, ಮೈಸೂರು – 13, ರಾಮನಗರ – 5, ಮಂಗಳೂರು, ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗಳಲ್ಲಿ – 2 ಹುಬ್ಬಳ್ಳಿ/ಧಾರವಾಡ, ಬೆಳಗಾವಿ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳಲ್ಲಿ ತಲಾ 1 ರಂತೆ ಒಟ್ಟು 457 ಮಾಹಿತಿ ತಂತ್ರಜ್ಞಾನ ಕಂಪನಿಗಳು ಅದೇ ರೀತಿ ಜೈವಿಕ ತಂತ್ರಜ್ಞಾನ ಕಂಪೆನಿಗಳು ಬೆಂಗಳೂರು – 40, ಬಾಗಲಕೋಟೆ, ರಾಮನಗರ, ಮೈಸೂರು, ಕೋಲಾರ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತಲಾ – 1, ಹಾಗೂ ಮೈಸೂರು ಜಿಲ್ಲೆಯಲ್ಲಿ – 2 ಸೇರಿದಂತೆ ಒಟ್ಟು 47.

ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಅಡಿಯಲ್ಲಿ ಸೃಜಿಸಿರುವ ಏಕಗವಾಕ್ಷಿ ಅನುಮೋದನಾ ಸಮಿತಿಯಲ್ಲಿ ಅನುಮೋದನೆಗೊಂಡ ಯೋಜನೆಗಳ ಪ್ರವರ್ತಕರಿಗೆ ಸರೋಜಿನಿ ಮಹಿಷಿ ವರದಿ ಅನ್ವಯ ಕನ್ನಡಿಗರಿಗೆ ಉದ್ಯೋಗ ನೀಡುವಂತೆ ಸೂಚಿಸಲಾಗಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

# ರಾಜ್ಯದಲ್ಲಿ 4 ಯುನಾನಿ ವೈದ್ಯಕೀಯ ಕಾಲೇಜು

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ 4 ಯುನಾನಿ ವೈದ್ಯಕೀಯ ಕಾಲೇಜುಗಳೀವೆ ಅವುಗಳಲ್ಲಿ 1 ಸರ್ಕಾರಿ ಕಾಲೇಜು ಮತ್ತು 3 ಅನುದಾನ ರಹಿತ ಖಾಸಗಿ ಕಾಲೇಜು ಆಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ.ಆರ್. ರಮೇಶ್‌ಕುಮಾರ್ ಅವರು ತಿಳಿಸಿದರು.

ವಿಧಾನಸಭೆಯಲ್ಲಿ ಇಂದು ನಡೆದ ಕಲಾಪ ಸಂದರ್ಭದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಅಶೋಕ್ ಖೇಣಿ ಅವರ ಪ್ರಶ್ನೆಗೆ ಉತ್ತರಿಸುತ್ತಾ ಬೀದರ್ ಜಿಲ್ಲೆಯಲ್ಲಿ ಯುನಾನಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಕುರಿತಂತೆ ಕರ್ನಾಟಕ ಯುನಾನಿ ವೆಲ್‌ಫೇರ್ ಫೌಂಡೇಷನ್ ಟ್ರಸ್ಟ್, ಬೆಂಗಳೂರುರವರು ಕೋರಿಕೆ ಸಲ್ಲಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

# ರಾಜ್ಯದಲ್ಲಿ 63682 ಅಂಗನವಾಡಿ ಕಾರ್ಯಕರ್ತೆಯರು

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ 63682 ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ತರೀಕೆರೆ ಶಾಸಕ ಶ್ರೀನಿವಾಸ್ ಅವರ ಪ್ರಶ್ನೆಗೆ ಉತ್ತರಿಸುತ್ತಾ ರಾಜ್ಯ ಸರ್ಕಾರವು 2017-18 ನೇ ಸಾಲಿನ ಆಯವ್ಯಯ ಭಾಷಣದಲ್ಲಿ

ಅಂಗನವಾಡಿ ಕಾರ್ಯಕರ್ತೆಯರಿಗೆ ರೂ 1000/- ಗಳ ಗೌರವಧನವನ್ನು ಹೆಚ್ಚಿಸಿ ಘೋಷಣೆ ಮಾಡಲಾಗಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

## ಕನ್ನಡ ಅಧ್ಯಯನ ಪೀಠ ಸ್ಥಾಪನೆ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಯಾವುದೇ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಾಗಿರುವುದಿಲ್ಲ. ದೇಶದಲ್ಲಿ ನವದೆಹಲಿಯಲ್ಲಿ ಜವಾಹರ ಲಾಲ್ ನೆಹರು ವಿಶ್ವಿವದ್ಯಾನಿಲಯ ಕನ್ನಡ ಅಧ್ಯಯನ ಪೀಠ ಸ್ಥಾಪನೆಯಾಗಿರುತ್ತದೆ ಹಾಗೂ ವಿದೇಶದ ಜರ್ಮನಿಯ ವ್ಯೂಜಬರ್ಗ್ ವಿಶ್ವ ವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವನ್ನು ಸ್ಥಾಪಿಸಲು ಕ್ರಮಕೈಗೊಳ್ಳಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅವರು ತಿಳಿಸಿದರು.

ಈ ಸಂಬಂಧ ಕನ್ನಡ ಸಂಸ್ಕೃತಿ ಇಲಾಖೆಯ ವತಿಯಿಂದ ಸ್ಥಾಪನೆ ಮಾಡಿರುವ ಕನ್ನಡ ಅಧ್ಯಯನ ಪೀಠಕ್ಕೆ ಅನುದಾನ ನೀಡುತ್ತಿದ್ದು, ಅದರಂತೆ ಸದರಿ ಅಧ್ಯಯನ ಪೀಠದಿಂದ ಕನ್ನಡಕ್ಕೆ ಸಂಬಂಧಿಸಿದಂತೆ ಕಾರ್ಯಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

## 80,207 ವಿದೇಶಿ ಪ್ರವಾಸಿಗರಿಂದ ಬೆಂಗಳೂರು ಪ್ರವಾಸಿ ಸ್ಥಳಗಳ ಭೇಟಿ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

2016-17 ನೇ ಸಾಲಿನಲ್ಲಿ (ಏಪ್ರಿಲ್ -2016 ರಿಂದ ಫೆಬ್ರವರಿ-2017 ರವರೆಗೆ) ಒಟ್ಟು 80,207 ವಿದೇಶಿ ಪ್ರವಾಸಿಗರು ಬೆಂಗಳೂರು ನಗರದ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಿರುತ್ತಾರೆ ಎಂದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

ಅವರು ಇಂದು ವಿಧಾನಸಭೆಯಲ್ಲಿ ನಡೆದ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ ಮಹಾಲಕ್ಷ್ಮೀ ಲೇಔಟ್‌ನ ಶಾಸಕ ಗೋಪಾಲಯ್ಯ ಕೆ ಅವರ ಪ್ರಶ್ನೆಗೆ ಉತ್ತರಿಸುತ್ತಾ ಈಗಾಗಲೇ ಬೆಂಗಳೂರು ನಗರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ದೇಶಿಯ ಹಾಗೂ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲು ಬೆಂಗಳೂರು ಟೂರಿಸಂ ಸಲಹಾ ಸಮಿತಿಯನ್ನು ರಚಿಸಲಾಗಿದೆ.

ಬೆಂಗಳೂರಿನಲ್ಲಿರುವ ವಿವಿಧ ಪ್ರವಾಸಿ ತಾಣಗಳ ಅಭಿವೃದ್ಧಿ ಬಗ್ಗೆ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಬೆಂಗಳೂರನ್ನು ವಿಶ್ವಮಟ್ಟದಲ್ಲಿ ಪ್ರಚಾರ ಪಡಿಸಲು, ಲೋಗೋ ಮತ್ತು ಟ್ಯಾಗ್ ಲೈನ್ (ಭಾರತದ ಪ್ರಜೆಗಳಿಗೆ) ಸ್ಪರ್ಧೆ ಏರ್ಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ವಿಶ್ವದಾದ್ಯಂತ ಬ್ರಾಂಡಿಂಗ್ ಮಾಡಲಾಗುವುದು.

ವಿದೇಶಗಳಲ್ಲಿ ನಡೆಯುವ ಪ್ರವಾಸಿ ಮೇಳಗಳಲ್ಲಿ ಪ್ರಚಾರ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದಾಗಿ ಪ್ರವಾಸಿ ಮಿತ್ರರನ್ನು ತರಬೇತಿ ನೀಡಿ ನಿಯೋಜಿಸಲಾಗಿದೆ. ಗೈಡ್‌ಗಳಿಗೆ ತರಬೇತಿ ನೀಡಲಾಗಿದೆ ಎಂದರು.

ಎಸ್‌ಎಂ.ಪಿಎಸ್‌ಐ:ಜಿಪಿಆರ್.

# ರಾಜ್ಯದಲ್ಲಿ 327 ಕಿಯೋನಿಕ್ಸ್ ಫ್ರಾಂಚೈಸಿ ತರಬೇತಿ ಕೇಂದ್ರಗಳು

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿಯೋನಿಕ್ಸ್ ಸಂಸ್ಥೆಯಿಂದ ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಒಟ್ಟು 327 ಕಿಯೋನಿಕ್ಸ್ ಫ್ರಾಂಚೈಸಿ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ತರಬೇತಿ ಕೇಂದ್ರಗಳಲ್ಲಿ ಸುಸಜ್ಜಿತವಾದ ಕಂಪ್ಯೂಟರ್‌ಗಳು ಪ್ರಿಂಟರ್‌ಗಳು, ಇಂಟರ್ ನೆಟ್ ಸೌಲಭ್ಯ, ಯುಪಿಎಸ್ ಹಾಗೂ ಮೂಲಸೌಕರ್ಯಗಳನ್ನು ಒದಗಿಸಲಾಗಿರುತ್ತದೆ. ಕಿಯೋನಿಕ್ಸ್ ಸಂಸ್ಥೆಯಿಂದ ಸಾಮಾನ್ಯ ಜನರಿಗೆ ಕೈಗೆಟಕುವ ದರಗಳಲ್ಲಿ ಕಂಪ್ಯೂಟರ್ ಕೋರ್ಸ್‌ಗಳಿಗೆ ಹಣವನ್ನು ನಿಗದಿಪಡಿಸಿ ಗ್ರಾಮೀಣ ಭಾಗದ ಜನರಿಗೆ ಅನುಕೂಲ ಮಾಡಿಕೊಡಲಾಗಿರುತ್ತದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿದರು.

**ಅವರು ಇಂದು ವಿಧಾನಸಭೆಯ ಕಲಾಪ ಸಂದರ್ಭದಲ್ಲಿ ಅರಸೀಕೆರೆ ಶಾಸಕ ಶಿವಲಿಂಗೇಗೌಡ ಅವರ ಪ್ರಶ್ನೆಗೆ ಉತ್ತರಿಸುತ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿಯಲ್ಲಿ 2016-17 ನೇ ಸಾಲಿನಲ್ಲಿ ಕಿಯೋನಿಕ್ಸ್ ಸಂಸ್ಥೆಗೆ ಒಟ್ಟು ರೂ 812.00 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ. 2015-16 ನೇ ಸಾಇನಲ್ಲಿ ಕಿಯೋನಿಕ್ಸ್ ಸಂಸ್ಥೆಗೆ ಒದಗಿಸಿದ ಅನುದಾನದಲ್ಲಿ ಇನ್ನೂ ತರಬೇತಿ ಕಾರ್ಯಕ್ರಮಗಳು ಮುಂದುವರೆದಿರುವುದರಿಂದ 2016-17 ನೇ ಸಾಲಿನಲ್ಲಿ ಒದಗಿಸಿರುವ ಅನುದಾನವನ್ನು ಬಳಕೆಮಾಡಿಕೊಂಡಿರುವುದಿಲ್ಲ ಎಂದರು.**

**ಎಸ್‌ಎಂ.ಪಿಎಸ್‌ಐ:ಜಿಪಿಆರ್.**

## ಎಸ್‌ಸಿಪಿ/ಟಿಎಸ್‌ಪಿ ಯೋಜನೆ ಅನುದಾನ – ಅನುಷ್ಠಾನ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಪ್ರವಾಸೋದ್ಯಮ ಇಲಾಖೆಗೆ ಕಳೆದ 3 ವರ್ಷಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಒಟ್ಟು 128.2 ಕೋಟಿ ಅನುದಾನ ನೀಡಲಾಗಿದೆ. ಅದರಲ್ಲಿ ಪ್ರವಾಸಿ ಟ್ಯಾಕ್ಸಿ, ಕರ್ನಾಟಕ ದರ್ಶನ ಪ್ರವಾಸ, ಪ್ರವಾಸಿ ಮಾರ್ಗದರ್ಶಿ ತರಬೇತಿ, ಸಂಗೀತ ಉಪಕರಣಗಳ ವಿತರಣೆ, ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ ಹಣವನ್ನು ಬಿಡುಗಡೆಗೊಳಿಸಿದೆ. ಈಗಾಗಲೇ ಕಾರ್ಯ ಪ್ರಗತಿಯಲ್ಲಿದೆ ಆಯಾ ಜಿಲ್ಲಾಧಿಕಾರಿಗಳು ಹಾಗೂ ಸಿ.ಇ.ಓ ಗಳಿಗೆ ಆದೇಶ ನೀಡಿದ್ದೇವೆ. ಎಂದರು. ಮಳವಳ್ಳಿ ಸದಸ್ಯರಾದ ನರೇಂದ್ರ ಸ್ವಾಮಿ ಪಿ.ಎಂ. ಅವರ ಪ್ರಶ್ನೆಗೆ ಅವರು ಉತ್ತರಿಸುತ್ತಾ ಮೇಲ್ಕಂಡ ವಿವರ ನೀಡಿದರು.

**ಎಸ್‌ಎಂ.ಪಿಎಸ್‌ಐ:ಜಿಪಿಆರ್.**

## ಪಡಿತರ ಚೀಟಿ ವ್ಯವಸ್ಥೆ ಸುಧಾರಿಸಲು ಕ್ರಮ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 58 ನ್ಯಾಯಬೆಲೆ ಅಂಗಡಿಗಳು, 43,405 ಬಿಪಿಎಲ್ ಪಡಿತರ ಚೀಟಿಗಳು, 1,003 ಎ.ಪಿ.ಎಲ್ ಪ.ಚೀಟಿಗಳು ಒಟ್ಟು 44,408 ಪ.ಚೀಟಿಗಳಿವೆ ಎಂದು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರಾದ ಯು.ಟಿ. ಖಾದರ್ ಅವರು ತಿಳಿಸಿದರು.

ಅವರು ಯಶವಂತಪುರ ವಿಧಾನಸಭಾ ಸದಸ್ಯರಾದ ಸೋಮಶೇಖರ್ ಎಸ್.ಟಿ. ಅವರ ಪ್ರಶ್ನೆಗೆ ಉತ್ತರಿಸುತ್ತಾ ಪಡಿತರ ವ್ಯವಸ್ಥೆ ಸುಧಾರಿಸಲು ಕುಟುಂಬದ ದತ್ತಾಂಶ ಸಿದ್ಧಪಡಿಸಿ ಆಧಾರ್ ಗೆ ಜೋಡಣೆ ಮಾಡುವ ಮೂಲಕ ನಕಲಿ ಚೀಟಿಗಳ ಪತ್ತೆ ಹಚ್ಚಲಾಗುತ್ತಿದೆ. ನಗರಪ್ರದೇಶಗಳಲ್ಲಿ ಬಯೋಮೆಟ್ರಿಕ್ ಕೂಪನ್ ವ್ಯವಸ್ಥೆ ತರುತ್ತಿದ್ದು, ನೈಜ ಪಡಿತರ ಚೀಟಿದಾರರು ಮಾತ್ರ ಪಡೆಯುವಂತಾಗುತ್ತದೆ. ಗ್ರಾಮಾಂತರ ಪ್ರದೇಶದ ಪಡಿತರ ವಿತರಣೆಯ ಮಾಹಿತಿಯನ್ನು ಆನ್ ಲೈನ್ ಐವಿಆರ್ಎಸ್ ಮೂಲಕ ಅಪ್‌ಡೇಟ್ ಮಾಡಲಾಗುತ್ತಿದೆ. ನ್ಯಾಯಬೆಲೆ ಅಂಗಡಿ ಮಟ್ಟದಲ್ಲಿ ಜಾಗೃತ ಸಮಿತಿ ರಚಿಸಲಾಗುತ್ತಿದೆ. ಆಧಾರ್ ನೊಂದಾಯಿತ ಮೊಬೈಲ್ ಸಂಖ್ಯೆಯಿಂದ ದೂರು ದಾಖಲಿಸಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಪಡಿತರ ಪದಾರ್ಥಗಳ ದುರುಪಯೋಗ ತಡೆಯಲು ಬಹುಮಾನ ಯೋಜನೆ ಜಾರಿಗೆ ತರಲಾಗಿದೆ ಎಂದರು.

**ಎಸ್‌ಎಂ.ಪಿಎಸ್‌ಐ:ಜಿಪಿಆರ್.**

## ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಲು ಆಗ್ರಹ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಶೂನ್ಯ ವೇಳೆಯಲ್ಲಿ ವಿರೋಧ ಪಕ್ಷದ ನಾಯಕ ಜಗದೀಶ್ ಶೆಟ್ಟರ್ ಅವರು ಪ್ರಸ್ತಾಪಿಸಿ ಹುಬ್ಬಿ ಕಿಮ್ಸ್ ಆಸ್ಪತ್ರೆಯಲ್ಲಿ ಒಂದೇ ಸ್ಟ್ರೆಚರ್ ಮೇಲೆ ಮೂರು–ನಾಲ್ಕು ಗರ್ಭಿಣಿ ಮಹಿಳೆಯನ್ನು ಚಿಕಿತ್ಸೆಗೆ ಕರೆದುಕೊಂಡು ಹೋಗುತ್ತಾರೆ. ಚಿಕಿತ್ಸೆಗೆಂದು ಹೋದ ರೋಗಿಗಳಿಗೆ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ. ಕೆಳಹಂತದಿಂದ ಮೇಲಿನವರೆಗೆ ಹಣ ಕೊಟ್ಟವರಿಗೆ ಚಿಕಿತ್ಸೆ ಸಿಗುತ್ತದೆ. ಸರಿಯಾದ ದಕ್ಷ ನಿರ್ದೇಶಕರಿಲ್ಲದೆ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು. ಸಂಬಂದಪಟ್ಟ ಸಚಿವರು ಉತ್ತರಿಸಿ ಈಗಾಗಲೇ ಕಿಮ್ಸ್ ಆಸ್ಪತ್ರೆಯ ಸುವ್ಯವಸ್ಥೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಬಜೆಟ್ ನಲ್ಲೂ ಈ ಬಗ್ಗೆ ಪ್ರಸ್ತಾಪಿಸಿದ್ದು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

**ಎಸ್‌ಎಂ.ಪಿಎಸ್‌ಐ:ಜಿಪಿಆರ್**

## ಮೂರು ವರ್ಷಗಳಲ್ಲಿ 3092 ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಸಮುದಾಯ ಭವನ ನಿರ್ಮಾಣ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲಾ, ತಾಲೂಕು, ಗ್ರಾಮ ಮಟ್ಟದಲ್ಲಿ ಒಟ್ಟು 3092 ಡಾ॥ ಬಿ.ಆರ್. ಅಂಬೇಡ್ಕರ್ ಹಾಗೂ

ಡಾ॥ ಬಾಬು ಜಗಜೀವನ್ ರಾಮ್ ಸಮುದಾಯ ಭವನಗಳನ್ನು ನಿರ್ಮಿಸಲಾಗಿದೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು. ಅವರು ಕೆ.ಆರ್. ಪೇಟೆ ಸದಸ್ಯರಾದ ನಾರಾಯಣ ಗೌಡ ಅವರ ಪ್ರಶ್ನೆಗೆ ಉತ್ತರಿಸುತಾ ಒಟ್ಟು 1869 ಭವನಗಳನ್ನು ಸರ್ಕಾರದಿಂದ ಸ್ವಂತ ನಿವೇಶನದಲ್ಲಿ ನಿರ್ಮಿಸಿದ್ದು, 1223 ಭವನಗಳಿಗೆ ನಿವೇಶನ ಲಭ್ಯವಿರುವುದಿಲ್ಲ ಎಂದು ತಿಳಿಸಿದರು.

**ಎಸ್‌ಎಂ.ಪಿಎಸ್‌ಐ:ಜಿಪಿಆರ್.**

**ಪತ್ರಿಕಾ ಪ್ರಕಟಣೆ**

## ಜನಪರ ಬಜೆಟ್ 2017 – ಮಾಧ್ಯಮ ನೋಟ ಪುಸ್ತಕ ಬಿಡುಗಡೆ

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

**ವಾರ್ತಾ ಮತ್ತು ಸಾರ್ವಜನಿಕರ ಸಂಪರ್ಕ ಇಲಾಖೆ ವತಿಯಿಂದ ಹೊರತಂದಿರುವ "ಜನಪರ ಬಜೆಟ್ – 2017 ಮಾಧ್ಯಮ ನೋಟ" ಕಿರುಹೊತ್ತಿಗೆಯನ್ನು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಇಂದು ವಿಧಾನಸೌಧದ ತಮ್ಮ ಕಛೇರಿಯಲ್ಲಿ ಬಿಡುಗಡೆ ಮಾಡಿದರು.**

**ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಯು.ಟಿ. ಖಾದರ್, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಡಾ. ಎಲ್.ಕೆ. ಅತೀಕ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್, ಉಪನಿರ್ದೇಶಕರಾದ ಬಸವರಾಜ ಎಂ. ಕಂಬಿ ಮೊದಲಾದವರು ಹಾಜರಿದ್ದರು.**

**ಎಸ್‌ಎಂ.ಜೆಡಿ:ಜಿಪಿಆರ್.**

## ವಿಶ್ವ ಕ್ಷಯರೋಗ ದಿನ – 2017

**ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)**

ಮಾರ್ಚ್ 24 ರಂದು ಜರ್ಮನ್ ದೇಶದ ಬರ್ಲಿನ್‌ನಲ್ಲಿ ನಡೆದ ವೈಜ್ಞಾನಿಕ ಸಮಾರಂಭದಲ್ಲಿ ಡಾ ರಾಬರ್ಟ್‌ಕಾಕ್ ಎಂಬ ವೈದ್ಯರು ಕ್ಷಯರೋಗಕ್ಕೆ ಮೈಕೋಬ್ಯಾಕ್ಟೀರಿಯಂ ಟ್ಯುಬರ್‌ಕ್ಯುಲೋಸಿಸ್ ಎಂಬ ರೋಗಾಣು ಕಾರಣ ಎಂದು ತೋರಿಸಿ ಕೊಟ್ಟ ದಿನ. ಆದಕಾರಣವಾಗಿ ಈ ದಿನವನ್ನು ವಿಶ್ವ ಕ್ಷಯರೋಗ ದಿನವೆಂದು ಆಚರಿಸುತ್ತಿದ್ದೇವೆ.

ಈ ವರ್ಷದ ಘೋಷಣೆ "ಎಲ್ಲರೂ ಒಗ್ಗೂಡಿ ಕ್ಷಯರೋಗವನ್ನು ನಿರ್ಮೂಲನೆಗೊಳಿಸೋಣ".

ಈ ದಿನದ ಮಹತ್ವ ಏನೆಂದರೆ ಕ್ಷಯರೋಗದ ಗುಣಲಕ್ಷಣಗಳು ಹರಡುವ ಬಗ್ಗೆ. ಚಿಕಿತ್ಸಾ ವಿಧಾನದ ನಿಯಂತ್ರಣದ ಬಗ್ಗೆ ಎಲ್ಲರೂ ಈ ವಿಷಯಗಳ ಬಗ್ಗೆ ಮಾತನಾಡುವಂತಾಬೇಕು. ಈ ಮಾಹಿತಿಯು ಕಟ್ಟಕಡೆಯ ವ್ಯಕ್ತಿಗೆ ಮಾಹಿತಿ ತಲುಪುವಂತಾಗಬೇಕು.

ಚಿಕಿತ್ಸೆ ಪಡೆಯದ ಕ್ಷಯರೋಗಿಯು ಕೆಮ್ಮಿದಾಗ, ಸೀನಿದಾಗ ರೋಗಾಣುಗಳು ಗಾಳಿಯಲ್ಲಿ ಸೇರಿಕೊಳ್ಳುತ್ತವೆ. ಆರೋಗ್ಯ ಮನುಷ್ಯ ಉಸಿರಾಡಿದಾಗ ಈ ರೋಗಾಣುಗಳು ಶ್ವಾಸಕೋಶದೊಳಗೆ ಸೇರಿಕೊಳ್ಳುತ್ತವೆ. ನಂತರ ದೇಹದ ಇತರ ಅಂಗಾಂಗಗಳಿಗೆ ಸೇರಿಕೊಳ್ಳಬಹುದು.

ಭಾರತ ದೇಶ ಒಂದೇ ಕಾಲು ಭಾಗದಷ್ಟು ರೋಗಿಗಳನ್ನು ಪ್ರಪಂಚಕ್ಕೆ ನೀಡುತ್ತದೆ. ಅಂದರೆ 10.4 ಮಿಲಿಯನ್ ಹೊಸರೋಗಿಗಳಲ್ಲಿ 2.8 ಮಿಲಿಯನ್ ರೋಗಿಗಳು ನಮ್ಮ ದೇಶದವರಾಗಿದ್ದಾರೆ. 40% ರಷ್ಟು ಜನರಲ್ಲಿ ಈ ರೋಗಾಣುಗಳಿರುತ್ತವೆ ಎಂದು ಅಂದಾಜಿಸಲಾಗಿದೆ.

ಭಾರತದಲ್ಲಿ 4.8 ಲಕ್ಷದಷ್ಟು ಜನರು ಪ್ರತಿ ವರ್ಷ ಸಾವನ್ನಪ್ಪುತ್ತಿದ್ದಾರೆ. ಪ್ರತಿ ದಿನ 6000 ಕ್ಕಿಂತ ಹೆಚ್ಚು ಜನರಿಗೆ ಖಾಯಿಲೆ ಹರಡುತ್ತದೆ. 600 ಜನ ಸಾವನ್ನಪ್ಪುತ್ತಿದ್ದಾರೆ. (5 ನಿಮಿಷಕ್ಕೆ ಇಬ್ಬರು ಮರಣ ಹೊಂದುತ್ತಿದ್ದಾರೆ)

ಕರ್ನಾಟಕದಲ್ಲಿ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಬೆಂಗಳೂರು ಮಹಾನಗರಪಾಲಿಕೆಯ 1994 ರಲ್ಲಿ 25 ಲಕ್ಷ ಜನಸಂಖ್ಯೆಗೆ ಪ್ರಾರಂಭಿಸಿ ನಂತರ ಅಕ್ಟೋಬರ್ 1998 ರಿಂದ ಆಗಸ್ಟ್ 2004 ರ ವೇಳೆಗೆ ರಾಜ್ಯದ ಎಲ್ಲಾ 30 ಜಿಲ್ಲೆಗಳು ಮತ್ತು ಬೆಂಗಳೂರು ಮಹಾನಗರಪಾಲಿಕೆ ಸೇರಿಸಿ 643 ಲಕ್ಷ ಜನಸಂಖ್ಯೆಗೆ ಪೂರ್ಣ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಕರ್ನಾಟಕದಲ್ಲಿ 2016 ರಲ್ಲಿ 6 ಲಕ್ಷ ಶಂಕಿತ ಕ್ಷಯರೋಗಿಗಳಲ್ಲಿ 60 ಸಾವಿರ ರೋಗಿಗಳಿಗೆ ಚಿಕಿತ್ಸೆ ನೀಡಿ ಶೇಕಡಾ 84 ಪ್ರತಿಶತ ಜನರನ್ನು ಸಂಪೂರ್ಣವಾಗಿ ಗುಣಮುಖಗೊಳಿಸಲಾಗಿದೆ.

ಕ್ಷಯರೋಗವು ಹೆಚ್.ಐ.ವಿ. ಸಹಂಕು ಉಳ್ಳ ರೋಗಿಗಳಲ್ಲಿ ಕಂಡುಬರುವ ಸಾಮಾನ್ಯ ಅನುಕೂಲಕರ ಸೋಂಕಾಗಿದೆ. ಕ್ಷಯ/ಹೆಚ್ಐವಿ/ಏಡ್ಸ್ ರೋಗಿಗಳ ಸಾವು ನೋವುಗಳನ್ನು ಕಡಿತಗೊಳಿಸಲು ಕೇಂದ್ರ, ರಾಜ್ಯ ಮತ್ತು ಜಿಲ್ಲೆಗಳಲ್ಲಿ ಕ್ಷಯ ಮತ್ತು ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳನ್ನು ಜಂಟಿಯಾಗಿ ನಿರ್ವಹಿಸುತ್ತಿವೆ. 2016 ರಲ್ಲಿ 60000 ಕ್ಷಯರೋಗಿಗಳಲ್ಲಿ ಶೇಕಡಾ 95 ಪ್ರತಿಶತ ರೋಗಿಗಳಿಗೆ ಹೆಚ್ಐವಿ ಪರೀಕ್ಷೆಯನ್ನು ಮಾಡಲಾಗಿದ್ದು, ಶೇಕಡಾ 11 ರಷ್ಟು ಹೆಚ್ಐವಿ–ಟಿಬಿ ಕೋಇನ್‌ಫೆಕ್ಷನ್ ಇದೆ ಎಂಧು ಪತ್ತೆ ಹಚ್ಚಲಾಗಿದೆ. ಹೆಚ್ಐವಿ–ಟಿಬಿ ರೋಗಿಗಳಲ್ಲಿ ಶೇಕಡಾ 95 ಪ್ರತಿಶತ ರಷ್ಟು ರೋಗಿಗಳಿಗೆ ಆರ್ಟ್ ಮಾತ್ರ ನೀಡಲಾಗಿದೆ. ಬಹು ಔಷಧ ನಿರೋಧಕ ಕ್ಷಯರೋಗ: (ಎಂಡಿಆರ್ ಟಿಬಿ) ಕರ್ನಾಟಕದಲ್ಲಿ ಬಹು ಔಷಧ ನಿರೋಧಕ ಕ್ಷಯರೋಗಿಗಳನ್ನು ಪತ್ತೆ ಹಚ್ಚುವುದು ಮತ್ತು ಚಿಕಿತ್ಸೆ ಹಾಗೂಅನುಸರಣಾ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಲಾಗಿದೆ. ಬಹು ಔಷಧ ನಿರೋಧಕ ಕ್ಷಯರೋಗಗಳ ಚಿಕಿತ್ಸೆಯು ಅತ್ಯಂತ ದುಬಾರಿಯಾಗಿದ್ದು(ಪ್ರತಿರೋಗಿಗೆ ಸುಮಾರು ರೂ 2 ಲಕ್ಷಕ್ಕೂ ಅಧಿಕ) ಕೇಂದ್ರ ಸರ್ಕಾರವು ಇದಕ್ಕೆ ಬೇಕಾಗುವ ಔಷಧಿಗಳನ್ನು ಖರೀದಿಸಿ, ರಾಜ್ಯಗಳಿಗೆ ಸರಬರಾಜು ಮಾಡುತ್ತಿದೆ. ಈ ಔಷಧಿಗಳನ್ನು ರೋಗಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ. ಈ ಚಿಕಿತ್ಸೆ ಅವಧಿಯು 24 ರಿಂದ 27 ತಿಂಗಳುಗಳಾಗಿರುತ್ತದೆ. ಕರ್ನಾಟಕ ಆರ್.ಎನ್.ಟಿ.ಸಿ.ಪಿ. ಕಾರ್ಯಕ್ರಮದಲ್ಲಿ ಸೆಪ್ಟೆಂಬರ್ 2011 ರಿಂದ ಔಷಧ ಪ್ರತಿರೋಧ ಕ್ಷಯರೋಗಿಗಳನ್ನು ಕಂಡುಹಿಡಿಯಲು 3 ವಿಶೇಷ ಪ್ರಯೋಗಶಾಲೆಗಳನ್ನು ವ್ಯವಸ್ಥೆಗೊಳಿಸಲಾಗಿದೆ. ಮತ್ತು 6 ಜಿಲ್ಲಾ ಕೇಂದ್ರಗಳಲ್ಲಿ ಡಿ.ಆರ್.ಟಿ.ಬಿ. ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.

ಭಾರತ ಸರ್ಕಾರವು 2035 ನೇ ವರ್ಷಕ್ಕೆ ಭಾರತದಲ್ಲಿ ಕ್ಷಯರೋಗ ನಿರ್ಮೂಲನೆ ಮಾಡಲು ಎಲ್ಲಾ ತರಹದ ಆರೋಗ್ಯ ಸಂಸ್ಥೆಗಳನ್ನು (ಸಾರ್ವಜನಿಕ ಹಾಗೂ ಖಾಸಗಿ ಆರೋಗ್ಯ ಸಂಸ್ಥೆಗಳು) ಸರ್ಕಾರೇತರ ಸಂಸ್ಥೆಗಳು, ಕ್ಷಯರೋಗ ನಿರ್ಮೂಲನೆಯಲ್ಲಿ ತೊಡಗಿರುವ ಇತರೆ ಪಾಲುದಾರರನ್ನು ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದಲ್ಲಿ ಒಗ್ಗೂಡಿಸಿಕೊಂಡು ಕ್ಷಯ ಮುಕ್ತ ದೇಶವನ್ನಾಗಿಸುವ ಪಣತೊಟ್ಟಿದೆ.

ಎಸ್‌ಎಂ.ಜಿಡಿ:ಜಿಪಿಆರ್.

# ಕೃಷಿಯಲ್ಲಿ ದೂರ ಶಿಕ್ಷಣ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶನಾಲಯವು ಕೃಷಿಯಲ್ಲಿ ಹೊಸ ಅವಿಷ್ಕಾರಗಳನ್ನು ದೂರ ಶಿಕ್ಷಣದ ಮೂಲಕ ರೈತರಿಗೆ ಮುಟ್ಟಿಸುವ ಸಲುವಾಗಿ, 2017-18 ಶೈಕ್ಷಣಿಕ ವರ್ಷದಲ್ಲಿ ನಾಲ್ಕು ವಿಷಯಗಳಲ್ಲಿ (ಒಂದು ಡಿಪ್ಲೋಮಾ ಮತ್ತು ಮೂರು ಸರ್ಟಿಫಿಕೇಟ್ ಕೋರ್ಸ್‌ಗಳು) ದೂರ ಶಿಕ್ಷಣ ಕಾರ್ಯಕ್ರಮವನ್ನು ಕನ್ನಡ ಭಾಷೆಯಲ್ಲಿ ನಡೆಸಲಿದೆ.

1. ಒಂದು ವರ್ಷದ ಕೃಷಿ ಡಿಪ್ಲೋಮಾ (ಅವಧಿ 12 ತಿಂಗಳು, ಹತ್ತನೇ ತರಗತಿ ಪಾಸಾದವರು, ಕೋರ್ಸ್ ಶುಲ್ಕ ರೂ. 10,000/-) 2. ಸಮಗ್ರ ಕೃಷಿ (ಅವಧಿ 12 ತಿಂಗಳು, ಏಳನೇ ತರಗತಿ ಪಾಸಾದವರು, ಕೋರ್ಸ್ ಶುಲ್ಕ - ರೂ. 1500/- 3. ಆಹಾರ ಧಾನ್ಯ, ಹಣ್ಣು ಮತ್ತು ತರಕಾರಿಗಳ ಕೋಯ್ಲೋತ್ತರ ನಿರ್ವಹಣೆ (ಅವಧಿ 6 ತಿಂಗಳು, ಏಳನೇ ತರಗತಿ ಪಾಸಾದವರು, ಕೋರ್ಸ್ ಶುಲ್ಕ - 1000 ರೂ. ) 4. ಸಾವಯವ ಕೃಷಿ-ಅಂಚೆ ಶಿಕ್ಷಣದ ಮೂಲಕ (ಅವಧಿ 12 ತಿಂಗಳು, ಓದು ಬರಹ ಬಲ್ಲವರು, ಕೋರ್ಸ್ ಶುಲ್ಕ ರೂ 200/-)

ಅರ್ಜಿ ಶುಲ್ಕ ಡಿಪ್ಲೋಮಾ ಕೋರ್ಸ್‌ಗೆ 100/- ರೂ. ಮತ್ತು ಟರ್ಫಿಕೇಟ್ ಕೋರ್ಸ್‌ಗೆ ರೂ 50/- ಮೌಲ್ಯದ ಡಿ.ಡಿ/ಪೋಸ್ಟಲ್ ಆರ್ಡರ್‌ನ್ನು ಕಂಟ್ರೋಲರ್ (Controller, UAS, GKVK, Bangalore ) ಇವರಿಗೆ ಸಂದಾಯವಾಗುವಂತೆ ಸಲ್ಲಿಸಿ ಅರ್ಜಿಯನ್ನು ಸಂಯೋಜಕರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಹೆಬ್ಬಾಳ, ಬೆಂಗಳೂರು - 560 024 ಮತ್ತು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕಾರ್ಯವ್ಯಾಪ್ತಿಯಲ್ಲಿ ಬರುವಂತಹ ಕೃಷಿ ವಿಜ್ಞಾನ ಕೇಂದ್ರಗಳಿಂದ (ಹಾಡೋನಹಳ್ಳಿ-ದೊಡ್ಡಬಳ್ಳಾಪುರ, ಚಂದುರಾಯನಹಳ್ಳಿ-ಮಾಗಡಿ, ಹರದನಹಳ್ಳಿ-ಚಾಮರಾಜನಗರ, ಕುರುಬೂರು ಫಾರಂ-ಚಿಂತಾಮಣಿ, ಕಂದಲಿ-ಹಾಸನ, ಕೋನೆಹಳ್ಳಿ-ತಿಪಟೂರು ಮತ್ತು ವಿಸಿ ಫಾರಂ-ಮಂಡ್ಯ) ದಿನಾಂಕ: 01-03-2017 ಪಡೆಯಬಹುದಾಗಿದೆ ಅಥವಾ www.uasbangalore.edu.in ಜಾಲತಾಣದಿಂದ ಡೌನ್‌ಲೋಡ್ ಮಾಡಿ, ನಿಗದಿತ ಅರ್ಜಿ ಶುಲ್ಕ ಮತ್ತು ಕೋರ್ಸ್ ಶುಲ್ಕದೊಡನೆ ಭರ್ತಿಮಾಡಿದ ಅರ್ಜಿಗಳನ್ನು ಏಪ್ರಿಲ್ 28 ರ ಒಳಗೆ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು - 24 ಇವರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080 – 23418884 ಮೂಲಕ ಸಂಪರ್ಕಿಸಬಹುದಾಗಿದೆ.

ಎಸ್‌ಎಂ.ಜೆಡಿ:ಜಿಪಿಆರ್.

## ಅವಧಿ ವಿಸ್ತರಣೆ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

2017–18 ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಲು ಇಚ್ಛಿಸುವ ಅರ್ಹ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ/ಟ್ರಸ್ಟ್‌ಗಳಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ "ಅರ್ಜಿ ನಮೂನೆ" **(Form –I)** ರಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು –31–03–2017 ರವರೆಗೆ ವಿಸ್ತರಿಸಲಾಗಿದೆ.

ಹೆಸರನ್ನು ನೋಂದಾಯಿಸಿಕೊಳ್ಳಲು ಜಂಟಿ ನಿರ್ದೇಶಕರು (ಮಾನ್ಯತೆ ಮತ್ತು ಅನುದಾನ), ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಅರ್ಜಿಯನ್ನು ಸಲ್ಲಿಸುವುದು.

ಆನ್ ಲೈನ್ ಅರ್ಜಿ ನಮೂನೆ ಮತ್ತು ಹೆಚ್ಚಿನ ವಿವರಗಳನ್ನು ಇಲಾಖೆಯ ವೆಬ್‌ಸೈಟ್ **www.pue.kar.nic.in** ಇಲ್ಲಿಂದ ಪಡೆಯಬಹುದು.

2017–18 ನೇ ಶೈಕ್ಷಣಿಕ ಸಾಲಿನಲ್ಲಿ ಪದವಿಪೂರ್ವ ಕಾಲೇಜನ್ನು ಪ್ರಾರಂಭಿಸಲು ಆನ್‌ಲೈನ್ ಮೂಲಕ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಅರ್ಜಿ ಆಹ್ವಾನ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ವ್ಯಾಪ್ತಿಗೆ ಒಳಪಡುವ ಕರ್ನಾಟಕ ಸಂಗೀತ, ಹಿಂದೂಸ್ಥಾನಿ ಸಂಗೀತ, ಸುಗಮ ಸಂಗೀತ, ನೃತ್ಯ, ಕಥಾಕೀರ್ತನ ಮತ್ತು ಗಮಕ ಕಲಾ ಪ್ರಕಾರಗಳಲ್ಲಿ ಯುವ ಹಾಗೂ ಹಿರಿಯ ಕಲಾವಿದರ ಪುಸ್ತಕಗಳನ್ನು ಹೊರತರಲು ಅಕಾಡೆಮಿ ನಿರ್ಧರಿಸಿದೆ.

ಎಲ್ಲಾ ಕಲಾಪ್ರಕಾರಗಳಿಂದ ಸಾಕಷ್ಟು ಅರ್ಜಿಗಳು ಸ್ವೀಕೃತವಾಗಿರದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅರ್ಜಿಯನ್ನು ಆಹ್ವಾನಿಸಿದೆ.

ಈ ಮೊದಲು ಅರ್ಜಿ ಸಲ್ಲಿಸಿದವರನ್ನು ಹೊರತುಪಡಿಸಿ ಹೊಸದಾಗಿ ಅರ್ಜಿ ಸಲ್ಲಿಸುವವರು ನಿಯಮನಗಳನ್ವಯ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

ಅರ್ಜಿ ನಮೂನೆಯನ್ನು ರಿಜಿಸ್ಟ್ರಾರ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಭವನ; 2ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು – 560 002 ಹಾಗೂ ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಭರ್ತಿಮಾಡಿದ ಅರ್ಜಿಗಳನ್ನು ಅಕಾಡೆಮಿ ಗೊತ್ತುಪಡಿಸಿದ ಆಯಾ ಕಲಾ ಪ್ರಕಾರಗಳ ಸಂಪಾದಕರ ವಿಳಾಸಕ್ಕೆ ಮಾರ್ಚ್ 28 ರೊಳಗಾಗಿ ಕಳುಹಿಸಿಕೊಡಬಹುದಾಗಿದೆ. ಆಯಾ ಕಲಾ ಪ್ರಕಾರಗಳ ಸಂಪಾದಕರ ವಿಳಾಸ ಇಂತಿದ್ದು, ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಲಾಪ್ರಕಾರಗಳ ಸಂಪಾದಕರನ್ನು ಸಂಪರ್ಕಿಸಬಹುದಾಗಿದೆ.

ಕರ್ನಾಟಕ ಸಂಗೀತ – ಶ್ರೀ ಎಂ. ದ್ವಾರಕೀಶ್, ತಂದೆ ಗೋಪಾಲಾಚಾರ್, ಎಂ. ಹಳೇ ಮಾರ್ಕೆಟ್ ರಸೆ, ಇ.ಪಿ. ಬ್ರದರ್ಸ್ ಹತ್ತಿರ, ಚಿತ್ರದುರ್ಗ – 577 501, 9448872944/9483938565.

ಹಿಂದೂಸ್ತಾನಿ ಸಂಗೀತ – ಪ್ರೊ. ಸಿದ್ದರಾಮಯ್ಯ ಮಠಪತಿ, ಸಂಗೀತ ಪ್ರಾಧ್ಯಾಪಕರು, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ, ಮೊ. ಸಂಖ್ಯೆ 9448923500.

ಸುಗಮ ಸಂಗೀತ – ಶ್ರೀಮತಿ ಎಚ್.ಆರ್. ಲೀಲಾವತಿ, ಜಯಲತ, 76, ಮಾರುತಿ ಟೆಂಪಲ್ ರಸ್ತೆ, 2ನೇ ಸರಸ್ವತಿಪುರಂ, ಮೈಸೂರು – 570 009, ಮೊ. ಸಂಖ್ಯೆ 9379252241

ನೃತ್ಯ – ಪ್ರೊ ಕೆ. ರಾಮಮೂರ್ತಿರಾವ್, ನೂಪುರ, 327, 4ನೇ ಮುಖ್ಯರಸ್ತೆ, 2ನೇ ಹಂತ, ಜೆ.ಪಿ. ನಗರ, ಮೈಸೂರು – 570 008 ಮೊ. ಸಂಖ್ಯೆ 9886379314.

ಕಥಾಕೀರ್ತನ – ಶ್ರೀಮತಿ ಗೀತಾ ಬಿ ಮಾಲತೇಶ್, ಶ್ರೀ ರಾಮಕೃಷ್ಣ ಮೆಡಿಕಲ್, 757/35, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ. ಮೊ: 9449374410

ಗಮಕ – ಶ್ರೀಮತಿ ಹಾ.ವೀ. ಮಂಜುಳಾ ಶಿವಾನಂದ, 36, 2ನೇ ಮುಖ್ಯರಸ್ತೆ, ಶೇಷಾದ್ರಿಪುರ, ಬೆಂಗಳೂರು – 560 020. ಮೊ. 9480511714.

ಎಸ್‌ಎಂ:ಜೆಡಿ:ಜಿಪಿಆರ್

## "ರೀಜನಲ್ ಮಾಡರ್ನಿಟಿ" "ದ ಮದ್ರಾಸ್‌ಆರ್ಟ್ ಮೂವ್‌ಮೆಂಟ್" ಕುರಿತು ಪ್ರದರ್ಶನ

ಬೆಂಗಳೂರು, ಮಾರ್ಚ್ 23, (ಕರ್ನಾಟಕ ವಾರ್ತೆ)

ಭಾರತ ಸರ್ಕಾರದ ಸಾಂಸ್ಕೃತಿಕ ಸಚಿವಾಲಯದ ವತಿಯಿಂದ ಬೆಂಗಳೂರಿನ ರಾಷ್ಟ್ರೀಯಆಧುನಿಕ ಕಲಾ ಸಂಗ್ರಹಾಲಯ (ಎನ್.ಜಿ.ಎಂ.ಎ) ಯಲ್ಲಿ ***"ರೀಜನಲ್ ಮಾಡರ್ನಿಟಿ" "ದ ಮದ್ರಾಸ್ಆರ್ಟ್ ಮೂವ್‌ಮೆಂಟ್"*** ಎಂಬ ಪ್ರದರ್ಶನವನ್ನುಎಲ್ಲ ಕಲಾವಿದರುಗಳಿಗೆ, ಕಲಾಪ್ರೇಮಿಗಳಿಗೆ ಹಾಗೂ ಜನಸಾಮಾನ್ಯರಿಗೆ ಪ್ರಸ್ತುತ ಪಡಿಸಲು ಹರ್ಷಿಸುತ್ತೇನೆ. ಸುಮಾರು 120 ಕಲಾಕೃತಿಗಳನ್ನು ಈ ಪ್ರದರ್ಶನವು ಒಳಗೊಳ್ಳಲಿದ್ದು, ಎನ್.ಜಿ.ಎಂ.ಎಯ ಸಂಗ್ರಹದಿಂದಲೂಆಯ್ದ ಕೃತಿಗಳಿಲ್ಲಿವೆ. ಇತರೆಕಲಾವಿದರಿಂದಲೂ, ಸಂಗ್ರಹದಿಂದಲೂ ಕಲಾಕೃತಿಗಳನ್ನು ಈ ಪ್ರದರ್ಶನಕ್ಕಾಗಿಕಡತರಲಾಗಿದೆ. ಎನ್.ಜಿ.ಎಂ.ಎ ಬೆಂಗಳೂರು, ಮಾಧ್ಯಮ ಮಿತ್ರರನ್ನುಉದ್ಘಾಟನಾ ಸಮಾರಂಭ ಮತ್ತು ಪ್ರದರ್ಶನಕ್ಕೆ ಹಾರ್ದಿಕವಾಗಿಆಮಂತ್ರಿಸುತ್ತಾ, ಸಮಾರಂಭದುದ್ದಕ್ಕೂ ಹಾಜರಿದ್ದು ಸಮಾರಂಭವನ್ನು ವರದಿ ಮಾಡುವಂತೆ ವಿನಂತಿಸಿದೆ. ಪ್ರಸ್ತುತ ಪ್ರಮುಖ ಪ್ರದರ್ಶನವು ಭಾರತೀಯ ಕಲಾ ಇತಿಹಾಸದಲ್ಲಿನಐತಿಹಾಸಿಕ ಕಾಲಘಟ್ಟದ ಬಗೆಗಿನ ಒಂದು ಪಕ್ಷಿನೋಟವನ್ನು ನೀಡುತ್ತದೆ. ವೀಕ್ಷಣೆಯಒಂದು ಹೊಸ ಆಯಾಮವನ್ನುತೆರೆಯಲಿರುವ ಪ್ರಸ್ತುತ ಪ್ರದರ್ಶನವು ಸುಮಾರು ಸಮಯದ ಹಿಂದೆ ವೀಕ್ಷಿಸಿದ ಕೆಲವೊಂದು ಕಲಾಕೃತಿಗಳೂ ಸೇರಿ ಹಿಂದಿನ ಅನೇಕ ಸಂಗ್ರಹಗಳನ್ನೂ ನೋಡಲುಒಂದುಉತ್ತಮಅವಕಾಶವನ್ನು ಮಾಡಿಕೊಟ್ಟಿದೆ. ಹೆಚ್ಚಿನ ಪ್ರಚಾರವನ್ನು ನೀಡಿ ನಮ್ಮನ್ನುತುಂಬಾಜನರಿಗೆತಲುಪಿಸುವ ಮಹತ್ತರವಾದ ಸಹಕಾರವನ್ನು ನೀಡುವಂತೆ ಮಾಧ್ಯಮ ಮಿತ್ರರಲ್ಲಿ ವಿನಂತಿಸುತ್ತೇವೆ. ಸಹಕಾರಕ್ಕೆ ಮತ್ತುಉದ್ಘಾಟನಾ ಸಮಾರಂಭಕ್ಕೆ ಆಗಮಿಸುವ ಬಗ್ಗೆ ಮುಂಚಿತವಾಗಿಧನ್ಯವಾದವನ್ನು ತಿಳಿಸಬಯಸುತ್ತೇವೆ.

**ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಬೆಂಗಳೂರು ಸಹಯೋಗದೊಂದಿಗೆ** ಉದ್ಘಾಟನಾ ಸಮಾರಂಭ: ಶುಕ್ರವಾರ, 24ನೇ ಎಪ್ರಿಲ್ 2017, ಸಂಜೆ. 6.00 ಗಂಟೆಗೆ ನಗರದ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ನಂ 49, ಮಾಣಿಕ್ಯವೇಲು ಮ್ಯಾನ್‌ಷನ್, ಅರಮನೆ ರಸೆ, ಬೆಂಗಳೂರು – 560 052 ಇಲ್ಲ ನಡೆಸಲಿದೆ.

ಪ್ರಸ್ತುತ ಪ್ರದರ್ಶನವನ್ನುಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ **ಸುಭಾಶ್‌ಚಂದ್ರಕುಂಟಿಯಾ, ಭಾ.ಆ.ಸೇ.**ಇವರುಉದ್ಘಾಟಿಸಲಿದ್ದು, ಶ್ರೀ **ಅದ್ವೈತಗಡನಾಯಕ್**, ಮಹಾ ನಿರ್ದೇಶಕರು, ಎನ್.ಜಿ.ಎಂ.ಎಇವರು ಪ್ರಕಟನೆಯನ್ನು ಲೋಕಾರ್ಪಣೆಗೈಯಲಿದ್ದು, ಕಾರ್ಯಕ್ರಮದಅಧ್ಯಕ್ಷತೆಯನ್ನುಶ್ರೀ **ಸುಧಾಕರರಾವ್ ಭಾ.ಆ.ಸೇ.(ನಿ.)**,ಅಧ್ಯಕ್ಷರು, ಸಲಹಾ ಸಮಿತಿ, ಎನ್.ಜಿ.ಎಂ.ಎ.ಬೆಂಗಳೂರು,ಇವರು ವಹಿಸಲಿದ್ದಾರೆ.

ಪ್ರಸ್ತುತ ಪ್ರದರ್ಶನವು ಮದ್ರಾಸ್ಆರ್ಟ್ ಮೂಮೆಂಟ್ಎಂದೇ ಪ್ರಸಿದ್ಧಿ ಹೊಂದಿದದಕ್ಷಿಣದಲ್ಲಿಆಧುನಿಕತೆಯಆಕಾರ ಮತ್ತು ವಕ್ರತೆಯನ್ನು ನೀಡಿದಕಲಾವಿದರನ್ನು

ಪ್ರತಿನಿಧಿಸುತ್ತದೆ. ಮದ್ರಾಸು ಕಲಾ ಚಳುವಳಿಯು ಒಂದು ಪ್ರಾಂತೀಯ ಚಳುವಳಿಯಾಗಿತ್ತು.1950ರ ಮದ್ಯಭಾಗದಿಂದ ನೆಲೆನಿಲ್ಲತೊಡಗಿದ ಈ ಚಳುವಳಿಯು ಆಧುನಿಕತೆಗೊಂದುಅಧಿಕಾರಸ್ಥಗುಣವನ್ನೂ, ಸ್ಥಳೀಯ ಸಂಸ್ಕೃತಿಗೊಂದುಗೌರವವನ್ನೂ ದೊರಕಿಸಿಕೊಟ್ಟಿತ್ತು.1850ರಲ್ಲಿ ಸ್ಥಾಪಿತಗೊಂಡ ಮದ್ರಾಸ್ ಸ್ಕೂಲ್‌ಆಫ್‌ಆರ್ಟ್ಸ್‌ಅಂಡ್‌ಕ್ರಾಫ್ಟ್ಸ್‌ತದನಂತರ 1960ರಲ್ಲಿ ಈ ಚಳುವಳಿಯು ಹುಟ್ಟಿಕೊಳ್ಳಲು ನೇರವಾಗಿ, ಪರೋಕ್ಷವಾಗಿ ನೆರವಾಗಿದೆ.ಕೆ.ಸಿ.ಎಸ್. ಫಣಿಕ್ಕರ್ ಮತ್ತುಎಸ್. ಧನ್‌ಪಾಲ್‌ಇವರುತಮ್ಮಚಿತ್ರ ಕಲೆ ಮತ್ತು ಶಿಲ್ಪಕಲೆಗಳ ಮೂಲಕ ಈ ಚಳುವಳಿಗೆ ಗಟ್ಟಿಯಾದ ತಳಹದಿ ಹಾಕಿದ ನಂತರಇನ್ನಿತರಕಲಾವಿದರುಇದರಅಭಿವೃದ್ಧಿ ಮತ್ತು ಬೆಳವಣಿಗೆಗೆ ತಮ್ಮದೇ ಕೊಡುಗೆಗಳನ್ನು ನೀಡಿದರು.ಈ ಕಲಾ ಚಳುವಳಿಯು ಭಾರತೀಯಕಲೆಯ ಅನೇಕ ವಿಷಯಗಳಲ್ಲಿ ಒಂದು ವಿಭಿನ್ನವಾದ ಮತ್ತು ವಿಶಿಷ್ಟವಾದ ಗುರುತು ಮತ್ತು ಪಾತ್ರವನ್ನು ಹೊಂದಿತ್ತು.

ಮದ್ರಾಸ್ ಕಲಾ ಚಳುವಳಿಯು ಒಂದು ಸ್ಥಳೀಯ ಚಳುವಳಿಯಾಗಿತ್ತು.1950ರ ದಶಕದ ಮಧ್ಯಭಾಗದಲ್ಲಿಅದುತನ್ನದೇಆದೊಂದು ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಳ್ಳತೊಡಗಿತು.ಆಧುನಿಕತೆಯಅಧಿಕಾರವೊಂದನ್ನು ಸ್ಥಾಪಿಸಿಕೊಳ್ಳುವುದು ಅದರಆಶಯವಾಗಿತ್ತು.ಸ್ಥಳೀಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಹೀಗೆ ಮಾಡುವ ಅನಿವಾರ್ಯತೆಯೂಅದಕ್ಕಿದ್ದಿತು.1960ರ ದಶಕದಲ್ಲಿಮದ್ರಾಸ್ ಸ್ಕೂಲ್‌ಆಫ್‌ಆರ್ಟ್ಸ್‌ಅಂಡ್‌ಕ್ರಾಫ್ಟ್ಸ್ (ವಸಾಹತುಕಾಲದಲ್ಲಿ ಸ್ಥಾಪಿಸಲಾದಕಲಾಸಂಸ್ಥೆಯಿದು) ಎಂಬ ಶಿಕ್ಷಣ ಸಂಸ್ಥೆಯು ಈ ಚಳುವಳಿಯ ಹುಟ್ಟಿಗೆಕೇಂದ್ರಬಿಂದುವಾಗಿ ಹೊರಹೊಮ್ಮಿತು.ಡಿ.ಪಿ.ರಾಯ್‌ಚೌಧುರಿಯವರಅಧಿಕಾರಾವಧಿಯಲ್ಲಿ ಈ ಕಲಾಚಳುವಳಿಯ ಹಂದರವನ್ನುರೂಪಿಸಲಾಗಿತ್ತು.ಚೌಧುರಿಯವರು (1930ರಿಂದ 1957ರವರೆಗೆ) ಈ ವಸಾಹತು ಪ್ರಣೀತಕಲಾಶಾಲೆಯ ಮೊದಲ ಭಾರತೀಯ ಪ್ರಾಂಶುಪಾಲರಾಗಿದ್ದರು.ತನ್ನತನವನ್ನು ಕಾಯ್ದುಕೊಳ್ಳುವ ಲಲಿತಕಲೆಯಕಾರ್ಯವಿಧಾನವೊಂದನ್ನುರೂಪಿಸಲು ಇವರುತತ್‌ಕ್ಷಣದ ಹಾಗೂ ಗ್ರಾಹ್ಯಯೋಗ್ಯವಾದ ವಿಧಾನವೊಂದನ್ನು ನಿರೂಪಿಸಲು ಯತ್ನಿಸಿದ್ದರು. ಶಾಸ್ತ್ರೀಯವಾಗಿ, ಪಾಶ್ಚಾತ್ಯದಿಂದಆಮದುಗೊಂಡ, ಮಾನವದೇಹದ ಸುವಿಸ್ತಾರಅಧ್ಯಯನದ ವಸಾಹತು ಶೈಕ್ಷಣಿಕಕ್ರಮವನ್ನುಇವರು ಬದಿಗೆ ಸರಿಸಿದರು.ರಾಯ್‌ಅವರಇಂತಹ ಶೋಧನೆಯನ್ನು ಬಲವಂತದ, ಒತ್ತಾಯದ ಅನ್ವೇಷಣೆಗಳೆಂದೇ ಭಾವಿಸಲಾಯಿತು. ಚೌಧುರಿಯವರು 1930ರಲ್ಲಿ ಆಡಳಿತಾತ್ಮಕ ಮುಖ್ಯಸ್ಥರಾಗಿ ನೇಮಕಗೊಂಡರು.ರಾಯ್‌ಅವರುಗಂಭೀರಕಲಾವಿದರನ್ನುತಮ್ಮ ಶಾಲೆಯ ಮೂಲಕ ಹುಟ್ಟಿಹಾಕಲಿಕ್ಕಾಗಿ ಸೃಜನಶೀಲ ಶಿಕ್ಷಣದ ಪುನರ್–ನಿರೂಪಣೆಯಅಗತ್ಯವನ್ನು ಮನಗಂಡಿದ್ದರು. ಇವರ ಈ ಹೊಳಹುಗಳನ್ನು ತದನಂತರ 1950ರಲ್ಲಿ ಕೆ.ಸಿ.ಎಸ್.

ಫಣಿಕ್ಕರ್‌ಅವರು ಮುಂದುವರಿಸಿದರು.ಚೌಧುರಿಯವರ ನಂತರದ ಆಡಳಿತಾಧಿಕಾರಿಯಾಗಿ ಬಂದ ಫಣಿಕ್ಕರ್‌ಅವರು ಪ್ರಸಿದ್ಧ ಆಧುನಿಕಯುರೋಪಿಯನ್‌ಕಲಾವಿದರನ್ನುಅಧ್ಯಯನ ಮಾಡುವ ಅನಿವಾರ್ಯತೆಯನ್ನು ಮನಗಂಡರು.ಫಣಿಕ್ಕರ್‌ಅವರು ಸೂಚಿಸಿ, ನಿರೂಪಿಸಿದ ಪಠ್ಯಕ್ರಮವು ನವೀನ ಮಾರ್ಗಗಳನ್ನು ತೆರೆದು ತೋರಿಸಿತು.ಮುಂದೊಮ್ಮೆ ಈ ನಿರ್ದಿಷ್ಟ ಶಾಲೆಯಗುಣಲಕ್ಷಣವೇಆಗಿಹೋದಗುರುತರಅಭಿವ್ಯಕ್ತಿ ಕ್ರಮಗಳು ಹಾಗೂ ತಂತ್ರಗಾರಿಕೆಗಳಿಗೆ ಇವರು ಬುನಾದಿ ಹಾಕಿದರು. ಮದ್ರಾಸು ಕಲಾಚಳುವಳಿಯ ಬೆಳವಣಿಗೆಗೆ ಮಾರ್ಗದರ್ಶಿಯಾದ ಆರಂಭಿಕ ಹಂತದ ಸಂಕ್ಷಿಪ್ತಇತಿಹಾಸವಿದು.

ಮದ್ರಾಸ್ ಕಲಾ ಚಳುವಳಿಯ ಕಲಾವಿದರ ಪ್ರತಿಬಾ ಪ್ರದರ್ಶನದಕಾರಣಕ್ಕೆಎರಡುವಿಶಾಲ ಮಾರ್ಗಗಳನ್ನಾಗಿ ವಿಭಾಗಿಸಿಬಿಡಬಹುದು.ಅವುಗಳಲ್ಲಿ ಒಂದುಅಮೂರ್ತ ಮತ್ತೊಂದುರೂಪನಿಷ್ಠ ಎಂದು.ಪಿತೃಪ್ರಧಾನ ಶ್ರೇಣಿಯನ್ನುದಾಟಿ ಹಲವು ಮಹಿಳಾ ಕಲಾವಿದರುತಮ್ಮದೇ ವ್ಯಕ್ತಿಗತ ಕಲಾ ಪ್ರಾಬಲ್ಯವನ್ನು ಮೆರೆದಿದ್ದಾರೆ.ಅವರುಗಳಲ್ಲಿ ಅರ್ನವಾಝ್ ವಾಸುದೇವ್ (1945 –1988), ಟಿಕೆ ಪದ್ಮಿನಿ (1943–1982), ರಾಣಿ ನಂಜಪ್ಪ ಮತ್ತು ಅನಿಲಾ ಜಾಕೋಬ್ (1941).

ಪ್ರಸ್ತುತ ಪ್ರದರ್ಶನವು ಸಾರ್ವಜನಿಕರಿಗೆ 25ನೇ ಮಾರ್ಚ್ 2017ರಿಂದ 23ನೇ ಎಪ್ರಿಲ್ 2017ರವರೆಗೆ ಪ್ರತೀದಿನ ಬೆ. 10.00 ರಿಂದ ಸಾಯಂಕಾಲ 5.00ರವರೆಗೆ ತೆರೆದಿರುತ್ತದೆ. (ಸೋಮವಾರ ಮತ್ತುರಾಷ್ಟ್ರೀಯರಜಾದಿನಗಳನ್ನು ಹೊರತುಪಡಿಸಿ)